


# ಪ್ರಿಯಾಂಕಾ ಹೊಗಳಿದ ಡಿಪ್ಸ್

ಪ್ರಿಯಾಂಕಾ ಚೋಪ್ರಾ ಮತ್ತು ದೀಪಿಕಾ ಪಡುಕೋಣೆ ನಡುವೆ ಶೀತಲ ಯುದ್ಧ ಮುಗಿದ ಅಧ್ಯಾಯ ಎನ್ನುತ್ತಿದ್ದಾರೆ ಬಾಲಿವುಡ್ ಪಂಡಿತರು. ಇದಕ್ಕೆ ಕಾರಣ ದೀಪಿಕಾ ಪಡುಕೋಣೆಯ ಜಾಣ ನಡೆ! ಏಕಾಏಕಿ ಪ್ರಿಯಾಂಕಾ ಚೋಪ್ರಾಳನ್ನು ಹೊಗಳುವ ಮೂಲಕ ದೀಪಿಕಾ ಬಾಲಿವುಡ್‌ನಲ್ಲಿ ಅಚ್ಚರಿಯ ಅಲೆ ಎಬ್ಬಿಸಿದ್ದಾಳೆ. ಟಿವಿಯ ಹರಟೆ ಕಾರ್ಯಕ್ರಮವೊಂದರಲ್ಲಿ 'ಪ್ರಿಯಾಂಕಾ ನನಗಿಂತ ಬಲಶಾಲಿ ನಟಿ' ಎನ್ನುವುದು ಡಿಪ್ಸ್ ಶ್ಲಾಘನೆ. ನಂಬರ್ ಒನ್ ಪಟ್ಟದ ಮೇಲೆ ಕಣ್ಣಿಟ್ಟು ತೀವ್ರ ಸ್ಪರ್ಧೆ ಒಡ್ಡುತ್ತಿರುವ ಈ ಇಬ್ಬರೂ ಈಗ ಗೆಳತಿಯರಾಗುವತ್ತ ಹೊರಟಿರುವುದು ಬಾಲಿವುಡ್‌ನ ಹಲವರಲ್ಲಿ ಈರ್ಷ್ಯೆಯನ್ನೂ ಹುಟ್ಟು ಹಾಕಿದೆಯಂತೆ.

ಈ ಮಧ್ಯೆ ಇನ್ನೊಬ್ಬ ಸೂಪರ್ ತಾರೆ ಕರೀನಾ ಕೂಡಾ ಪ್ರಿಯಾಂಕಾಳನ್ನು ಹೊಗಳಿರುವ ಸುದ್ದಿ ಬಂದಿದೆ. ಅಮೆರಿಕನ್ ಟಿವಿ ಷೋ ಕ್ವಾಂಟಿಕೋ ಮೂಲಕ ಪ್ರಿಯಾಂಕಾ ಬಾಲಿವುಡ್‌ಅನ್ನು ಜಾಗತಿಕ ನಕ್ಷೆಗೆ ಏರಿಸಿದ್ದಾರೆ ಎನ್ನುವುದು ಕರೀನಾ ಮಾತು. ಜತೆಗೆ ಬೇವಾಚ್ ಸರಣಿಯಲ್ಲಿ ಅಭಿನಯ, ಪದೇ ಪದೇ ಆಸ್ಕರ್ ಸಹಿತ ಹಲವು ಪ್ರತಿಷ್ಠಿತ ಪ್ರಶಸ್ತಿ ಸಮಾರಂಭಗಳಲ್ಲಿ ಭಾಗವಹಿಸಿದ್ದು ಕೂಡಾ ಅಮೆರಿಕದಲ್ಲಿ ಪ್ರಿಯಾಂಕಾ ಜನಪ್ರಿಯತೆಗೆ ಕಾರಣವಾಗಿದೆ. ಬಹಳ ಹಿಂದೆ ಐತ್ರಾಝ್ ಎಂಬ ಚಿತ್ರದಲ್ಲಿ ಪ್ರಿಯಾಂಕಾ ಜತೆ ನಟಿಸಿದ್ದ ಕರೀನಾ, "ಆಕೆಯ ಸಾಧನೆಗೆ ನಮಗೆಲ್ಲರಿಗೂ ಹೆಮ್ಮೆ ತಂದಿದೆ" ಎಂದಿದ್ದಾರೆ. ಒಟ್ಟಾರೆ ಎಲ್ಲರ ನಾಲಗೆಯಲ್ಲೂ ಈಗ ಪ್ರಿಯಾಂಕಾ ಹೆಸರು.

# ಮುರಿದು ಬಿತ್ತು ಜೋಲಿ-ಪಿಟ್ ಮದುವೆ

ಹಾಲಿವುಡ್ ತಾರೆಯರ ಮದುವೆಗಳು ಮುರಿದು ಬೀಳುವುದಕ್ಕೆ ಕಾರಣಗಳೇ ಬೇಕಿಲ್ಲ! ಏಕೆಂದರೆ ಅಲ್ಲಿ ಮದುವೆ ಆಗುವುದಕ್ಕೂ ಬಲವಾದ ಕಾರಣಗಳು ಇರುವುದಿಲ್ಲ. ಸಾಮಾನ್ಯವಾಗಿ ಕೂಡಿಕೆಯ ಸಂಬಂಧಗಳೇ ಅಲ್ಲಿ ವಿಜೃಂಭಿಸುತ್ತಿರುವಾಗ ಯಾರಾದರೂ ಇಬ್ಬರು ತಾರೆಯರು ಮದುವೆ ಆದರೆಂದರೆ ಅದೇ ಅಲ್ಲಿ ವಿಚಿತ್ರ.

ಕಳೆದ ಕೆಲವು ವರ್ಷಗಳಿಂದ ಮದುವೆಯಾಗಿ ಮಕ್ಕಳ ಜತೆ ಎಲ್ಲೆಂದರಲ್ಲಿ ಓಡಾಡುತ್ತಿದ್ದ ಆಂಜೆಲಿನಾ ಜೋಲಿ ಮತ್ತು ಬ್ರಾಡ್ ಪಿಟ್ ಇಬ್ಬರು ಮದುವೆ ಮುರಿದುಬಿದ್ದಿರುವ ಸುದ್ದಿಯೂ ಇದಕ್ಕೀಗ ಇನ್ನೊಂದು ದೃಷ್ಟಾಂತ.

ಗಂಡ ಹೆಂಡತಿ ಮಧ್ಯೆ ಜಗಳವಾದಾಗ ಮಗ ಮಡಾಕ್ಸ್ ಅಮ್ಮನ ಪರವಾಗಿ ದನಿಯೇರಿಸಿ ಮಾತನಾಡಿದನಂತೆ. 15ರ ಮಗ ತನ್ನ ವಿರುದ್ಧ ಕೂಗಾಡಿದ್ದು ನೋಡಿ ಸಿಟ್ಟಿಗೆದ್ದ ಬ್ರಾಡ್ ಪಿಟ್, ಕತ್ತಿಗೆ ಕೈ ಹಾಕಿ ತಳ್ಳಿದನಂತೆ. ಲಾಸ್ ಏಂಜಲೀಸ್ ಪೊಲೀಸರು ಮಕ್ಕಳ ಮೇಲಿನ ದೌರ್ಜನ್ಯದ ತನಿಖೆಗೆ ಜೋಲಿ ಮನೆಗೆ ಬಂದಿದ್ದರಂತೆ. ಜೋಲಿ ಡೈವೋರ್ಸ್‌ಗೆ ಅರ್ಜಿ ಸಲ್ಲಿಸಲು ಇದೇ ಮುಖ್ಯ ಕಾರಣ ಎನ್ನುವುದು ಬಲ್ಲವರ ಮಾತು.

ಅಂದ ಹಾಗೆ ಗಂಡ ಹೆಂಡತಿ ನಡುವೆ ಜಗಳ ನಡೆದದ್ದು ಫ್ಯಾಮಿಲಿ ವಿಮಾನದೊಳಗೆ ಮೂವರೂ ಫ್ರಾನ್ಸ್‌ನಿಂದ ಲಾಸ್ ಏಂಜಲೀಸ್‌ಗೆ ಪಯಣಿಸುತ್ತಿದ್ದಾಗ. ವಿಮಾನದಲ್ಲಿ ಬ್ರಾಡ್ ಪಿಟ್ ಕುಡಿತದ ಅಮಲಿನಲ್ಲಿದ್ದ ಎನ್ನುವುದು ಸುದ್ದಿ. ಮಗನನ್ನು ತಳ್ಳುವಾಗಲೇ ಬ್ರಾಡ್ ಪಿಟ್ ಕುಡಿದಿದ್ದರೆ ಕೇಸ್ ಇನ್ನಷ್ಟು ಟೈಟ್ ಆಗುವುದು ಖಂಡಿತಾ!

